ವೈಭವವನ್ನು ಕತೆಗಿಳಿಸಿ, ಸ್ಥಿತಪ್ರಜ್ಞಳಂತೆ ವರ್ಣಿಸುತ್ತಿರುವಾಗ ಹಿತ್ಲಕಡೆ ಬಾಗಿಲ ಹೊಸ್ತಿಲಲ್ಲಿ, ಮಬ್ಬು ಆಕಾಶದಲ್ಲಿ ಯಾವುದೆಂದು ತಿಳಿಯದೇ ಕಪ್ಪಾಗಿ ತೇಲಿ ಹೋಗುತ್ತಿರುವ ಯಾವುದೋ ಹಕ್ಕಿಗಳನ್ನು ನೋಡುತ್ತಾ ಕುಳಿತಿರುತ್ತಿದ್ದ ಶ್ರೀಪಾದನಿಗಾಗ ಎಂಟೋ ಹತ್ತರದ್ದೋ ಪ್ರಾಯ. ಅಪ್ಪಯ್ಯನನ್ನು ಕಳೆದುಕೊಂಡ ಅವನಿಗೆ ತನ್ನಮ್ಮನ ಕಥಾಪ್ರಸಂಗದಲ್ಲಿ ಸಿಕ್ಕಿಕೊಂಡ ಬಾರ್ಕೂರು ಎಂಬ ಪೂರ್ವಿಕರ ಊರು, ತಾನು ಕಂಡ ಬಾರ್ಕೂರಿಗಿಂತಾ ಭಿನ್ನವಾಗಿ ಎಲ್ಲೋ ಕನಸಿನಲ್ಲಿ ತೇಲಿ ಹೋದ ಭ್ರಾಮಕ ಜಗತ್ತಿನಂತೆ ಭಾಸವಾಗುತ್ತಿತ್ತು.

'ಇದ್ದೊಂದ್ ಕೊಂಡಿಯೂ ಕಳ್ದ ವರ್ಷ ಕಳ್ಚಿಕೊಂಡಿದ್ದೇ ಬಂತು, ಕಂಡ್ಯಾ. ಶೇಷೂಭಾವಯ್ಯರೂ ತೀರ್ಕಂಡ್ರು. ನನ್ನ ತಲಿಮಾರಿನೋರೆಲ್ಲಾ ಒಬ್ಬೊಬ್ರೇ ಹ್ವಾಗಿಯಾಯ್ತು. ನಾನೊಬ್ಳು ಬಾಕಿ. ಒಂದ್ ಸಲ ಶೇಷೂಭಾವಯ್ಯರ ಮಗ ಶಿವ್ರಾಮನ್ನ ಕಂಡ್ ಬಾ ಅಪ್ಪೀ. ಕೊಡ್ತಾ್ರ ಕೇಳುದಪಾ. ತಪ್ಪೆಂತಾ? ನಿಮ್ಮಪ್ಪಯ್ಯ ಇದ್ ಬದ್ ನಗ ನಾಣ್ಯ ದಾಗಿನ ಅಣ್ಣಯ್ನಾ ಮನೀಲಿ ಜ್ವಾಪಾನವಾಗಿತ್ತೇ್ಂತಾ, ನಮ್ ಮದ್ವೆಯಾದ್ ಮೇಲೂ ತಗಂಡ್ ಬರ್ದೇ ಅಷ್ಟೂನೂ ಅವ್ರ ಮನೀಲೇ ಇಟ್ಟಿದಲ್ಲನಾ? ಇಗಾ, ನಮ್ದು ನಮ್ಗೆ ಕೊಡೀಂತಾ ಕೇಳೂದೆಂತಾ ತಪ್ಪೂಂತಾ? ಈ ಸಲ ನೀ ಬಂದಿದ್ದೀ, ಬಾರ್ಕೂರಿಗೆ ಹ್ವಾಗಿ ಬರೋದೇ! ನಡೀ, ನಾನೂ ಬರ್ತೀನಿ!'

ಇದೀಗ ಪ್ರಾಯ ನಲವತ್ತೆಂಟರ ಹತ್ತಿರ ಬಂದಿರುವ ಶ್ರೀಪಾದನಿಗೆ ವೈದೇಹಿಯ ಮಾತೇನೂ ನಿನ್ನೆ ಮೊನ್ನೆಯದಾಗಿರಲಿಲ್ಲ. ಅಪ್ಪಯ್ಯ ಸತ್ತು ಅವನಿಗೆ ತಿಳಿವಳಿಕೆ ಬಂದಾಗಿಲಿಂದಲೂ ನಡೆಯುತ್ತಿದ್ದ ಮಾತುಕತೆಯದು. ತಾನೊಬ್ಬಳೇ ಹೋದ್ರೆ ಸಿಗುತ್ತದೋ ಇಲ್ಲವೋ ಅನ್ನುವ ಅನುಮಾನವೇ ಅವಳನ್ನು ಇಷ್ಟು ದಿನದವರೆಗೂ ಹಿಡಿದಿಟ್ಟಿತ್ತೋ ಯಾರಿಗೆ ಗೊತ್ತು? ಮಗನನ್ನು ಮುಂದಿಟ್ಟುಕೊಂಡು ಹೋದರೆ ಕೊಟ್ಟಾರೆನ್ನುವುದು ಅವಳ ನಂಬಿಕೆಯಿದ್ದಿರಬೇಕು. ಅದಕ್ಕಾಗಿ ಮೊದಲೆಲ್ಲಾ ಶ್ರೀಪಾದ ತನ್ನ ಕಾಲ ಮೇಲೆ ನಿಲ್ಲುವುದಕ್ಕಾಗಿ ಕಾಯುತ್ತಿದ್ದವಳು, ಅದ್ಯಾಕೋ ಆನಂತರ ಅದನ್ನು ಸಂಪೂರ್ಣ ಮರೆತಿದ್ದವಳು, ದೊಡ್ಡಮ್ಮ ತೀರಿಕೊಂಡ ಈಗೊಂದೆರಡು ವರುಷಗಳಿಂದ ಮತ್ತೆ ಶುರು ಮಾಡಿರುವುದು ಶ್ರೀಪಾದನ ಗಮನಕ್ಕೆ ಬಂದಿಲ್ಲವೆಂದಲ್ಲ. ಆದರೆ, ಅವನು ಮೊದಲಿನಿಂದಲೂ ಈ ಯಾವ ಮಾತನ್ನೂ ಕಿವಿ ಮೇಲೆ ಹಾಕಿಕೊಂಡವನಲ್ಲ. ಅವೆಲ್ಲವೂ ಕೆಸುವಿನೆಲೆಯ ಮೇಲಿನ ನೀರಿನಂತೆ ಸುಮ್ಮನೆ ಹರಿದು ಹೋಗುತ್ತಿದ್ದದ್ದೇ ಜಾಸ್ತಿ. ತನ್ನ ನೆನಪಿನಲ್ಲೇ ಉಳಿಯದ ತನ್ನಪ್ಪಯ್ಯ, ಒಂದಾನೊಂದು ಕಾಲದಲ್ಲಿ ಸ್ವಾತಂತ್ರ್ಯ ಹೋರಾಟದಲ್ಲಿ ಧುಮುಕಿದವರೆಂದು ಹೆಮ್ಮೆ ಪಡಬೇಕಿತ್ತೋ ಅಥವಾ ಆನಂತರವೂ ಆ ಭ್ರಮೆಯಿಂದಾಚೆ ಬಾರದೇ ಪಾಲಿಗೆ ಬಂದ ಚಿನ್ನ, ಬೆಳ್ಳಿ ಪಾತ್ರೆ ಪಗಡಿಗಳನ್ನೆಲ್ಲಾ ಇದ್ದೊಬ್ಬ ಅಣ್ಣನ ಮನೆಯಲ್ಲಿ ಸುಭದ್ರವಾಗಿರಲಿಯೆಂದು ಇಟ್ಟಿದನ್ನು ಕಡೆಗೂ ತಾರದೇ ಸತ್ತಿದ್ದಕ್ಕೆ ಮರುಗಬೇಕಿತ್ತೋ ಶ್ರೀಪಾದನಿಗೆ ಈಗಲೂ ತಿಳಿಯದ ವಿಷಯ. ತನಗೆ ಸಮ್ಮತಿಯಿಲ್ಲದ ವಿಚಿತ್ರ ಜವಾಬ್ದಾರಿಯನ್ನು ಹೇರಿ ಅದನ್ನೇ ತನ್ನಮ್ಮ ವ್ರತದಂತೆ ತನ್ನ ಮುದಿ ವಯಸ್ಸಿನವರೆಗೂ ಜಪಿಸುತ್ತಿರುವುದಕ್ಕೆ ಪರಿತಪಿಸಬೇಕೋ ಅಥವಾ ಸಂಭ್ರಮಿಸಬೇಕೋ ಅದೂ ಅವನಿಗೆ ಹೊಳೆಯುತ್ತಿರಲಿಲ್ಲ. ಈ ಐವತ್ತರ ಆಸುಪಾಸಿನಲ್ಲಿ ಎಲ್ಲದರಿಂದ ದೂರವಾಗಿ ತನ್ನಷ್ಟಕ್ಕೆ ನೆಮ್ಮದಿಯಾಗಿ ಬದುಕುತ್ತಿರುವ ಅವನಿಗೆ ಮತ್ತದೇ ಮಣಕಲು ವಾಸನೆಗೆ ಅಂಟಿಕೊಳ್ಳುವುದು ಮಹಾ ದುಸ್ಸಾಧ್ಯವೆನ್ನಿಸುತ್ತಿದ್ದದ್ದು ಮಾತ್ರ ಸುಳ್ಳಲ್ಲ.

ಒಂದು ವಿಷಾದವಷ್ಟೇ ಅವನ ಮನಸ್ಸಿನಲ್ಲಿ ಹಾದು ಹೋಗುತ್ತಿತ್ತು.

ಅವನಿನ್ನೂ ನಾಲ್ಕು ವರುಷದ ಹುಡುಗನಾಗಿದ್ದಾಗ, ಕಾರ್ಯನಿಮಿತ್ತ ಶಿವಮೊಗ್ಗಕ್ಕೆ ಹೋಗಿ ವಾಪಸಾದ ಅಪ್ಪಯ್ಯ ರಾತ್ರಿ ಕಳೆದು ಬೆಳಗಾಗುವುದರಲ್ಲೇ ರಕ್ತ ಕಾರಿ ವಾಂತಿ ಮಾಡಿಕೊಂಡು ಮಧ್ಯಾಹ್ನದ ಹೊತ್ತಿಗೆ ಮುಚ್ಚಿದ ಕಣ್ಣು ಮತ್ತೆಂದೂ ತೆರೆಯದೇ ಮಲಗಿದ್ದಲ್ಲೇ ತಣ್ಣಗಾಗಿ ಹೋದ ಕತೆಯನ್ನು, ಇದೇ ಹೊಸ್ತಿಲಲ್ಲಿ ಕುಳಿತು ಅವನಮ್ಮನಿಂದ ಕೇಳಿ ತಿಳಿದಿದ್ದು ಬಿಟ್ಟರೆ, ಅಪ್ಪಯ್ಯನ ಚಹರೆ